ಓ.ಎಸ್. ನಂ.76 /2019 ಪಿ.ಡಬ್ಲ್ಯೂ- 1

<u>ಸಾಕ್ಷಿಯನ್ನು ದಿನಾಂಕ 7.1.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದಃ</u>

ಪ್ರತಿವಾದಿ ಏನು ಲಿಖಿತ ಹೇಳಿಕೆ ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಕನ್ನಡ ಮತ್ತು ತಮಿಳು ಓದಲು ಮತ್ತು ಬರೆಯಲು ಬರುತ್ತದೆ. ನಾನು ಈಗ ಹುಣಸೂರು ತಾಲ್ಲೂಕಿನ ಚಿಕ್ಕ ಪಡುಕೋಟೆಯಲ್ಲಿ ವಾಸ ಮಾಡುತ್ತೇನೆ. ನಾನು ಅದೇ ಗ್ರಾಮದಲ್ಲಿ ಮತ ಚಲಾಯಿಸುತ್ತೇನೆ. ಸದರಿ ಮತದಾರರ ಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ರಲ್ಲಿ ನನ್ನ ಹೆಸರು ಕಾಳಿಯಣ್ಣ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಹಳೆ ಮತದಾರರ ಪಟ್ಟಿ ಎನ್ನುವರು. ನಿಡಿ 1 ರಲ್ಲಿ ಧನಲಕ್ಷ್ಮೀ ಕೆ ಎಂದರೆ ನನ್ನ ಹೆಂಡತಿ. ನನ್ನ ಖಾತೆ ಮೊದಲು ವಿಜಯಾ ಬ್ಯಾಂಕಿನಲ್ಲಿ ಇತ್ತು ಈಗ ಅದು ಬ್ಯಾಂಕ್ ಆಫ್ ಬರೋಡ ಆಗಿದೆ. ನಾನು 1 ವರ್ಷದ ಹಿಂದೆ ತೆರೆದಿರುತ್ತೇನೆ. ಸದರಿ ಬ್ಯಾಂಕ್ನಲ್ಲಿ ಖಾತೆಯನ್ನು ತೆರೆಯುವಾಗ ನನ್ನ ಹೆಸರು ಕಾಳಿಯಣ್ಣ ಎಂದು ನೀಡಿರುತ್ತೇನೆ. ನಾನು ತಮಿಳುನಾಡಿನಲ್ಲಿ ಜಮೀನನ್ನು ತೆರೆದು ಮಾರಾಟ ಮಾಡುತ್ತೇನೆ ಎಂದರೆ ಸರಿ. ಸಾಕ್ಷಿಗೆ ದಿನಾಂಕ 28.01.2005 ರ ಕ್ರಯಪತ್ರದ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿ ಅದು ನನ್ನ ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿರುವ ಕ್ರಯಪತ್ರ ಎಂದರೆ ಸರಿ ಎನ್ನುವರು. ಸದರಿ ಕ್ರಯಪತ್ರ ವನ್ನು ನಿಡಿ 2 ಎಂದು ಗುರುತಿಸಲಾಯಿತು, ಸದರಿ ಕ್ರಯಪತ್ರವನ್ನು ಆಂಗ್ಲ ಭಾಷ್ಟೆಗೆ ತರ್ಜಮೆ ಮಾಡಿದ ದಾಖಲೆಗಳನ್ನು ಸಹ ನ್ಯಾಯಾಲಯಕ್ಕೆ ನೀಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ನನ್ನ ಹೆಸರು ಕಾಳಿಯಣ್ಣ ಎಂದು ಮಾತ್ರ ನಮೂದಾಗಿರುತ್ತದೆ ಎಂದರೆ ಸರಿ.

ಸಾಕ್ಷಿಗೆ ದಿನಾಂಕ 05.03.2019 ರ ಕ್ರಯಪತ್ರದ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿ ಅದು ನನ್ನ ಹೆಸರಿನಲ್ಲಿರುವ ಕ್ರಯಪತ್ರ ಎಂದರೆ ಸರಿ ಎನ್ನುವರು. ಸದರಿ ಕ್ರಯಪತ್ರ ವನ್ನು ನಿಡಿ 3 ಎಂದು ಗುರುತಿಸಲಾಯಿತು, ಸದರಿ ಕ್ರಯಪತ್ರವನ್ನು ಆಂಗ್ಲ ಭಾಷ್ಟೆಗೆ ತರ್ಜಮೆ ಮಾಡಿದ ದಾಖಲೆಗಳನ್ನು ಸಹ ನ್ಯಾಯಾಲಯಕ್ಕೆ ನೀಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ನನ್ನ ಹೆಸರು ಕಾಳಿಯಣ್ಣ ಎಂದು ಮಾತ್ರ ನಮೂದಾಗಿರುತ್ತದೆ ಎಂದರೆ ಸರಿ.

ಸಾಕ್ಷಿಗೆ ದಿನಾಂಕ 20.11.2017 ರ ಕ್ರಯಪತ್ರದ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿ ಅದು ನಾನು ನನ್ನ ಹೆಂಡತಿ ಹೆಸರಿನಲ್ಲಿರುವ ಸ್ವತ್ತನ್ನು ಗಣೇಶ್ರವರಿಗೆ ಮಾರಾಟ ಮಾಡಿದ ಕ್ರಯಪತ್ರ ಎಂದರೆ ಸರಿ ಎನ್ನುವರು. ಸದರಿ ಕ್ರಯಪತ್ರ ವನ್ನು ನಿಡಿ 4 ಎಂದು ಗುರುತಿಸಲಾಯಿತು, ಸದರಿ ಕ್ರಯಪತ್ರವನ್ನು ಆಂಗ್ಲ ಭಾಷ್ಟೆಗೆ ತರ್ಜಮೆ ಮಾಡಿದ ದಾಖಲೆಗಳನ್ನು ಸಹ ನ್ಯಾಯಾಲಯಕ್ಕೆ ನೀಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ನನ್ನ ಹೆಸರು ಕಾಳಿಯಣ್ಣ ಎಂದು ಮಾತ್ರ ನಮೂದಾಗಿರುತ್ತದೆ ಎಂದರೆ ಸರಿ. ಪ್ರತಿವಾದಿ ಸಲ್ಲಿಸಿದ ಲಿಖಿತ ಹೇಳಿಕೆ ಬಗ್ಗೆ ನನಗೆ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ. ಲಿಖಿತ ಹೇಳಿಕೆ ಸಲ್ಲಿಸಿದ ನಂತರ ನಾನು ವಾದಪತ್ರವನ್ನು ತಿದ್ದುಪಡಿ ಮಾಡಿರುತ್ತೇನೆ ಎಂದರೆ ಸರಿ. ಪಹಣಿ, ಸಾಗುವಳಿ ಚೀಟಿ ಮತ್ತು ಮ್ಯುಟೇಷನ್ ಪ್ರತಿಗಳು ಸಾರ್ವಜನಿಕ ದಾಖಲೆಗಳಾಗಿದ್ದು ಅದರ ಪ್ರತಿಗಳನ್ನು ನಾವು ಪಡೆದುಕೊಳ್ಳುವೆವು ಎಂದರೆ ಸರಿ. ದಾವೆ ಹೂಡಿದ ನಂತರ

ನಾನು ಮೇಲೆ ಹೇಳಿದ ದಾಖಲೆಗಳ ಪ್ರತಿಯನ್ನು ಪಡೆದಿರುತ್ತೇನೆ. ಸಾಗುವಳಿ ಚೀಟಿಯ ನಕಲನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಿಪಿ 2 ರಲ್ಲಿ ಚೆಕ್ಕು ಬಂದಿ ನಕಾಶೆ ಪ್ರಕಾರ ನಮೂದು ಮಾಡಿರುತ್ತದೆ ಎಂದರೆ ಸರಿ, ಸದರಿ ನಕಾಶೆಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ.

ನನ್ನ ಮದುವೆ 2005 ನೇ ಇಸವಿಯಲ್ಲಿ ಆಗಿರುತ್ತದೆ. ನನ್ನ ಮದುವೆಯ ಕರೆಯೋಲೆ ಹಾಳಾಗಿರುತ್ತದೆ. ನನ್ನ ಮದುವೆ 2001 ನೇ ಇಸವಿಯಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. 2004 ರಲ್ಲಿ ನನಗೆ ಸಾಗುವಳಿ ಚೀಟಿ ನೀಡಲಾಗಿರುತ್ತದೆ. 1998 ರಲ್ಲಿ ದಾವಾಸ್ವತ್ತು ಮಂಜೂರಾಗಿರುತ್ತದೆ ಎಂದರೆ ಸರಿ. ನಿಪಿ2 ರಲ್ಲಿ ನನ್ನ ಹೆಸರು ಎನ್.ಮುತ್ತುಸ್ವಾಮಿ ಎಂದು ನಮೂದಾಗಿದೆ. ನನ್ನ ಹೆಸರು ಬರೀ ಕಾಳಿಯಣ್ಣ ಎಂದು ಆಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನನ್ನನ್ನು ಮುತ್ತುಸ್ವಾಮಿ ಎಂದು ಸಹ ಕರೆಯುವರು ಎನ್ನುವರು. ಸಾಗುವಳಿ ಚೀಟಿಯಲ್ಲಿ ನನ್ನ ಹೆಸರು ಕಾಳಿಯಣ್ಣ ಎಂದು ನಮೂದಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾನು ಮುತ್ತುಸ್ವಾಮಿ ಎಂದು ಅರ್ಜಿ ನೀಡಿರುತ್ತೇನೆ, ಆ ಕಾರಣ ನಿಪಿ2 ರಲ್ಲಿ ಮುತ್ತುಸ್ವಾಮಿ ಎಂದು ನಮೂದಾಗಿದೆ ಎನ್ನುವರು. ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ವತ್ತನ್ನು ಮಂಜೂರು ಮಾಡಬೇಕೆಂದು ನಾನು ಯಾವುದೇ ಅರ್ಜಿಯನ್ನು ಸರ್ಕಾರಕ್ಕೆ ನೀಡಿರುವುದಿಲ್ಲ ಮತ್ತು ನಿಪಿ2 ನನಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿರುವ ಸಹಿ ಮತ್ತು ವಾದಪತ್ರದಲ್ಲಿರುವ ಸಹಿ ವ್ಯತ್ಯಾಸವಿರುವ ಕಾರಣ ನಾನು ಬೇಕೆಂತಲೇ ನ್ಯಾಯಾಲಯಕ್ಕೆ ಅರ್ಜಿಯ ಪ್ರತಿ ನೀಡಿರುವುದಿಲ್ಲ ಎಂದರೆ ಸಾಕ್ಷಿ ಅದರಿ ಅರ್ಜಿ ಪ್ರತಿಯನ್ನು ನ್ಯಾಯಾಲಯಕ್ಕೆ ನೀಡುತ್ತೇನೆ ಎನ್ನುವರು. ನನ್ನನ್ನು ಮುತ್ತುಸ್ವಾಮಿ ಎಂದು ಸಹ ಕರೆಯುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ದಾಖಲೆಯನ್ನು ಹಾಜರುಪಡಿಸುತ್ತೇನೆ ಎನ್ನುವರು. ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ನನ್ನ ಹೆಸರು ಕಾಳಿಯಣ್ಣ ಮಾತ್ರ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಿಪಿ2 ರಲ್ಲಿರುವ ಮುತ್ತುಸ್ವಾಮಿ ನಾನಾಗಿರುವುದಿಲ್ಲ, ಅದು ಬೇರೆ ವ್ಯಕ್ತಿಯಾಗಿರುತ್ತಾನೆ ಎಂದರೆ ಸರಿಯಲ್ಲ.

ನಾನು ಮತ್ತು ಪ್ರತಿವಾದಿ ಗಂಡ ಶಂಕರ್‌ಗೌಂಡರ್ ಎಂದಿಗೂ ಸ್ನೇಹಿತರಾಗಿರುವುದಿಲ್ಲ ಎಂದರೆ ಸರಿಯಲ್ಲ. ಶಂಕರ್‌ಗೌಂಡರ್ ಗೆ ನಾನು ದಾವಾಸ್ವತ್ತು ನೋಡಿಕೊಳ್ಳಲು ಬಾಯಿಮಾತಿನಲ್ಲಿ ಹೇಳಿರುತ್ತೇನೆ, ಆದರೆ ಯಾವ ಲಿಖಿತ ದಾಖಲೆ ಇರುವುದಿಲ್ಲ. ಮೊದಲು ನಾನು ವಾದಪತ್ರದಲ್ಲಿ ಮೂಲದಾಖಲೆ ಶಂಕರ್‌ಗೌಂಡರ್ ಗೆ ನೀಡಿದ ಬಗ್ಗೆ ತಿಳಿಸಿರುವುದಿಲ್ಲ, ಅದನ್ನು ಲಿಖಿತ ಹೇಳಿಕೆ ಸಲ್ಲಿಸಿದ ನಂತರ ತಿದ್ದುಪಡಿ ಮೂಲಕ ವಾದಪತ್ರದಲ್ಲಿ ಸೇರಿಸಿರುತ್ತೇನೆ ಎಂದರೆ ಸರಿ. ಮೊದಲು ನಾನು ದಾಖಲೆಗಳನ್ನು ಶಂಕರ್‌ಗೌಂಡರ್ ರವರಿಗೆ ನೀಡಿದ ಬಗ್ಗೆ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ದಾವಾಸ್ವತ್ತಿನ ಮಾಲೀಕರಾಗಿರುವುದಿಲ್ಲ, ಆ ಕಾರಣ ನಾನು ಶಂಕರ್‌ಗೌಂಡರ್ ರವರಿಗೆ ದಾಖಲೆಗಳನ್ನು ನೀಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಸ್ವತ್ತಿಗೆ ನಾನು ಕಂದಾಯ ಪಾವತಿ ಮಾಡಿರುವುದಿಲ್ಲ. ನಾನು ದಾವಾಸ್ವತ್ತಿನ ಮಾಲೀಕನಾಗಿರುವುದಿಲ್ಲ, ಆ ಕಾರಣ ಕಂದಾಯ ಪಾವತಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ

ಮೌನವಾಗಿರುತ್ತಾರೆ. ನಾನು ದಾವಾಸ್ವತ್ತಿನ ಮಾಲೀಕರಾಗಿರುವುದಿಲ್ಲ, ಆ ಕಾರಣ ನ್ಯಾಯಾಲಯದಿಂದ ಯಾವುದೇ ಪರಿಹಾರ ಪಡೆದುಕೊಳ್ಳಲು ಯೋಗ್ಯನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ.

ಜಮೀನು ಮಂಜೂರು ಮಾಡಲು ನೀಡಬೇಕಾಗಿರುವ ಅರ್ಜಿ ಅಂದರೆ ಅಹವಾಲು ತಃಖ್ತೆಯಲ್ಲಿ ನನ್ನ ಮೇಲೆ ಎಷ್ಟು ಜನ ಅವಲಂಬಿತವಾಗಿರುತ್ತಾರೆ, ಹೆಸರು, ವಿಳಾಸ ಎಲ್ಲವನ್ನು ಭರ್ತಿ ಮಾಡಬೇಕು ಎಂದರೆ ಸರಿ.

ಸದರಿ ಅರ್ಜಿಯಲ್ಲಿ ಎಲ್ಲಿ ವಾಸ ಮಾಡುತ್ತಿದ್ದೇನೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನಾನು ಕೆ.ಎಡತೊರೆ ಮತ್ತು ಚಿಕ್ಕಪಡುವನಕೋಟೆಯಲ್ಲಿ ವಾಸ ಮಾಡುತ್ತೇನೆ. ನಾನು ಚಿಕ್ಕಪಡುವನಕೋಟೆಯಲ್ಲಿ ವಾಸ ಮಾಡುತ್ತಿರುವ ಬಗ್ಗೆ ಮಾತ್ರ ದಾಖಲೆ ನೀಡಿರುತ್ತೇನೆ. ನಿಪಿ2 ರಲ್ಲಿ ನಮೂದಾಗಿರುವ ಮುತ್ತುಸ್ವಾಮಿ ಮತ್ತು ನನ್ನ ವಿಳಾಸ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಕೆ.ಎಡತೊರೆ, ಟೈಗರ್ ಬ್ಲಾಕ್ ವಿಳಾಸವನ್ನು ನಮೂದು ಮಾಡಿರುತ್ತೇನೆ ಎನ್ನುವರು. ನಾನು ಅರ್ಜಿ ನೀಡುವಾಗ ನನಗೆ ಎಷ್ಟು ವರ್ಷ ಎಂದು ನಮೂದು ಮಾಡಿರುತ್ತೇನೆ ಎಂದು ಗೊತ್ತಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.